ಶಿಫ್ಟ್ ಆದ ಮೇಲೆ ಚಂದು ವಾಸ ಇಲ್ಲಿಗೆ ಶಿಫ್ಟ್ ಆಯ್ತು. ನಾವು ಇಂಗ್ಲೆಂಡಿಂದ ಬಂದು ಮತ್ತೆ ಸೆಟ್ಲ್ ಆಗುವ ಸಮಯದಲ್ಲಿ ವೀರೇಶ ಬಿ.ಎ. ಓದಿಕೊಂಡು ಜರ್ನಲಿಸ್ಟ್ ಆಗ್ತೀನಿ ಅಂತ ಪತ್ರಿಕೆಗೆ ಸೇರಿಕೊಂಡಿದ್ದ. ಜೊತೆಗೆ ಕೊಳಲಿನಂತಹ ಒಂದು ವಾದ್ಯ ನುಡಿಸುತ್ತಿದ್ದ. ಮುಂದೆ ಓದು. ಒಳ್ಳೆಯ ಕೆಲಸ ಹಿಡಿ ಅಂದೆ. ಹಂಪಿ ಬಿಟ್ಟು ಹೊರಗೆ ಹೋಗಲು ಒಪ್ಪಲಿಲ್ಲ. ಹಂಪಿಯಲ್ಲಿ ಗೈಡ್‌ಗಳು ತಪ್ಪುತಪ್ಪು ಮಾಹಿತಿ ಕೊಡ್ತಾರೆ ಅಂತ ಜಗಳನೂ ಮಾಡ್ತಿದ್ದ. ಒಮ್ಮೆ ಅದು ಅತಿರೇಕಕ್ಕೆ ಹೋಗಿತ್ತು. ಹಂಪಿ ಅಂದ್ರೆ ಅವನಿಗೆ ಅಫೀಮು. ಹಂಪಿ ಯುನೆಸ್ಕೊಗೆ ಸೇರಿದಾಗ ಇಲ್ಲಿ ಟೂರಿಸ್ಟ್ ಗೈಡ್ ತರಬೇತಿಗೆ ಪಾಠ ಮಾಡುವ ಸಂದರ್ಭ ನಂಗೇ ಬಂತು. ಜೊತೆಗೆ ಸ್ಪೋಕನ್ ಇಂಗ್ಲಿಷ್ ಬೇಕು ಅನಿಸಿದ್ದರಿಂದ ಮನೆಯಲ್ಲೇ ಕ್ಲಾಸ್ ಸುರು ಮಾಡಿದೆ. ಈ ಹುಡುಗನಿಗೆ ಇದೇ ಸರಿ ಅಂತ ಎಲ್ಲ ಬಿಟ್ಟು ಗೈಡ್ ಆಗು. ನೀನೂ ಹಂಪಿಯಲ್ಲೇ ಇರ್ತಿ. ಕೆಲಸವೂ ಆಯಿತು ಅಂತಂದೆ. ಇದು ನಮ್ಮ ವೀರಾಧಿವೀರ ವೀರೇಶ್ ಅಲಿಯಾಸ್ ಬಬ್ರು ಕಥೆ' ಮಾತು ನಿಲ್ಲಿಸಿ ದೀರ್ಘ ಶ್ವಾಸ ಎಳೆದುಕೊಂಡು ಪಕ್ಕದಲ್ಲಿದ್ದ ಟೀ ಸ್ಟಾಲಿನವನಿಗೆ ಎರಡು ಚಹಾ ಕೊಡಪ್ಪ ಅಂದರು.

ಮೂರ್ತಿಯವರ ಮಾತು ಕೇಳುತ್ತಾ ಹೋದಂತೆ ಅವಿನಾಶ ಸುಳಿಯಿಂದ ಇಷ್ಟಿಷ್ಟೇ ಹೊರ ಬರಲಾರಂಭಿಸಿದ್ದ. ವೀರೇಶನನ್ನು ಕಂಡಿದ್ದು ದೆಜಾವೂ ಅಲ್ಲ ಎಂಬುದು ನಿಚ್ಚಳವಾಗಿತ್ತು. ಅವಿನಾಶ ಹಿಂದುಸ್ಥಾನಿ ಸಂಗೀತ ಪ್ರೇಮಿ ಮಾತ್ರವಲ್ಲ. ಅಭ್ಯಾಸಿಯೂ. ಜರ್ಮನಿಗೆ ಹೋದ ಸುರುವಿನಲ್ಲಿ ಆರೇಳು ತಿಂಗಳ ಅವಧಿಯಲ್ಲಿ ಪರಿಚಯವಾದವ ಇದೇ ಬರ್ನಾಡೊ. ಸ್ಥಳೀಯ ಯೋಗ ಸೆಂಟರಲ್ಲಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮಕ್ಕೆ ಹೋಗಿದ್ದ. ಅಲ್ಲಿ ಹಾರ್ಮೋನಿಯಮ್ ನುಡಿಸಿದಾತ ಇದೇ ಬರ್ನಾಡೊ. ತಬಲಾ ನುಡಿಸಿದಾತ ಇವನದೇ ಯೂನಿವರ್ಸಿಟಿಯ ಹುಡುಗ. ಹಾಗೆ ಪರಿಚಯವಾಗಿತ್ತು. ಬರ್ನಾಡೊ ಈ ಹುಡುಗರನ್ನು ಜೊತೆಯಾಗಿ ಅಭ್ಯಾಸ ಮಾಡಲು ತನ್ನ ಮನೆಗೆ ಕರೆಯುತ್ತಿದ್ದ. ಅವನೇ ಹೇಳಿಕೊಂಡಂತೆ ಅವನಿಗೆ ಅರವತ್ತರ ಮೇಲೆಯೇ ವಯಸ್ಸು. ನಾಲ್ಕೈದು ಬಾರಿ ಅವನನ್ನು ಭೇಟಿ ಮಾಡಿದ್ದ ಅವಿನಾಶ. ಆತ ಬಹಳ ಪ್ರೀತಿ ತೋರಿಸಿದ್ದ. ಭಾರತೀಯ ಸಂಗೀತವನ್ನು ಪ್ರೀತಿಸುತ್ತಿದ್ದ ಆತ ಹಲವು ರಾಗಗಳನ್ನು ನುಡಿಸಿ ಹೇಗೆ ನಾನು ಎಂಬಂತೆ ಕಣ್ಣು ಹಾರಿಸುತ್ತಿದ್ದ. ಮೂರು ಜನ ಜೊತೆಯಾಗಿ ಸಂಗೀತ ರಿಯಾಝ್ ಮಾಡಿದ್ದರು, ಒಂಟಿಯಾಗಿದ್ದ ಆತನ ಜೀವನೋಪಾಯಕ್ಕಿರುವುದು ಆ ದೇಶದಲ್ಲಿರುವ ನಿರುದ್ಯೋಗಿಗಳಿಗಿರುವ ಪೆನ್ಶನ್. ಮೂರ್ನಾಲ್ಕು ಭೇಟಿಯ ನಂತರ ಒಮ್ಮೆ ಆತ ಲಹರಿಯಲ್ಲಿ ತನ್ನ ಬದುಕಿನ ಬಗ್ಗೆ ಹೇಳುತ್ತಾ, ತಾನು ದೇಶ ದೇಶ ಸುತ್ತುತ್ತಿದ್ದುದು ಅದರಲ್ಲೂ ಫ್ರಾನ್ಸ್, ಶ್ರೀಲಂಕಾ, ಭಾರತಕ್ಕೆ ಹೆಚ್ಚು ಹೋಗುತ್ತಿದ್ದುದು. ಭಾರತದಲ್ಲಿ ಡೆಲ್ಲಿ, ಕೊಲ್ಕತ್ತಾ, ಮದರಾಸ್, ಬನಾರಸ್ ಹಾಗೂ ಹಂಪಿಯಲ್ಲಿ ಬಹು ಕಾಲ ಇದ್ದಿದ್ದು, ತಾನು ಯಾವ ಭಾಗದಲ್ಲಿ ಜಾಸ್ತಿ ಕಾಲ ಇದ್ದೆನೋ ಅಲ್ಲಿ ತನಗಿದ್ದ ಗೆಳತಿಯರು... ಒಂದಷ್ಟು ಕಾಲ ಜೊತೆಗಿದ್ದಿದ್ದು... ಅದರಲ್ಲಿ ಕೆಲವರು ಬಸಿರಾದದ್ದು... ಲಗೇಜ್ ತನಗೆ ಇಷ್ಟ ಇಲ್ಲದ್ದರಿಂದ ಬಿಟ್ಟು ಹೊರಟ ಮೇಲೆ ಮತ್ತೆ ಮರಳಿ ಅವರನ್ನು ಭೇಟಿಯಾಗದಿರುವುದು... ಎಲ್ಲೆಲ್ಲಿ ತನಗೆ ಮಕ್ಕಳಿದ್ದಾರೆಂದು ತನಗೇ ಗೊತ್ತಿಲ್ಲ ಅನ್ನುತ್ತಾ ನನ್ನ ಬ್ಯಾಗೇಜ್ ಹೊತ್ತುಕೊಂಡು ತಿರುಗುವ ಹುಚ್ಚು ಹೆಂಗಸರು ಅನ್ನುತ್ತಾ ಗಹಗಹಿಸಿದ್ದ. ಅದೇ ಕೊನೆಯ ಭೇಟಿ. ಮುಂದೆಂದೂ ಆತನ ಮನೆ ಕಡೆ ಮುಖ ಹೊರಳಿಸಿರಲಿಲ್ಲ ಅವಿನಾಶ. ಆತ ಕರೆ ಮಾಡಿದಾಗೆಲ್ಲ ಥಿಸಿಸ್ ವರ್ಕ್ ಇದೆ ಅಂದು ಬಿಡುತ್ತಿದ್ದ. ಕ್ರಮೇಣ ಅವನ ಕರೆ ನಿಂತಿತ್ತು.

'ಸಾರ್ ಟೀ' ಎಂಬ ಟೀ ಸ್ಟಾಲ್ ಹುಡುಗನ ಧ್ವನಿ. ಮೂರ್ತಿಯವರು ಒಂದು ಸಿಪ್ ಚಹಾ ಹೀರಿ, 'ಟೀ ತಗೊಳ್ರಿ ಅವಿನಾಶ್. ಮತ್ತೆ ನಿಮ್ಮ ಗೆಳೆಯರಿಗೆ ಫೋನ್ ಮಾಡಿ ಕರೀರಿ. ವೀರೇಶನಿಗೆ ನಾನು ಫೋನ್ ಮಾಡ್ತೀನಿ. ಬಾದಲ್ ಊಟ ಅರೆಂಜ್ ಮಾಡಿಸ್ತಾಳೆ.' ಮೂರ್ತಿಯವರು ಹೇಳುತ್ತಿರುವುದು ಕಿವಿಗೆ ಬೀಳುತ್ತಿದ್ದರೂ ಅನೂಹ್ಯ ಸತ್ಯದೆದುರು ಅವಿನಾಶ ಬೆರ್ಚಪ್ಪನಂತೆ ನಿಂತಿದ್ದ. ವೀರೇಶನ ಆ ಕಣ್ಣುಗಳು. ಅವನ ಕುಣಿತ... ಥೇಟ್ ಬರ್ನಾಡೋನದೇ. ಬಹುಶಃ ಮೂರ್ತಿಗಳು ಹೇಳುತ್ತಿರುವ ಅವನ ಇಂಪನಿ ನಾದವೂ... ●